ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಇದಕ್ಕೆ ಪೂರಕವಾಗಿ ಇನ್ನೂ 500 ಹೊಸ ಕೊಳವೆ ಬಾವಿಗಳನ್ನು ಕೊರೆದು ನೀರು ಪೂರೈಕೆ ಮಾಡುವ ಕೆಲಸ ಪ್ರಗತಿಯಲ್ಲಿದೆ.

2. ವಾಣಿಜ್ಯ ಸಂಕೀರ್ಣ ಬಹುಮಹಡಿ ಗೃಹಸಮುಚ್ಚಯ ಬೃಹತ್ ಕಟ್ಟಡಗಳಿಗೆ ಹೊಸ ನೀರಿನ ಸಂಪರ್ಕ ಮಂಜೂರು ಮಾಡುವ ಸಮಯದಲ್ಲಿ ಒಳಚರಂಡಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಿರುವುದನ್ನು ಕಡ್ಡಾಯ ಮಾಡಲಾಗಿದೆ. ಇದರಿಂದ ಶುದ್ಧ ನೀರಿನ ಬೇಡಿಕೆ ಮೇಲೆ ಒತ್ತಡ ಕಡಿಮೆಯಾಗುತ್ತದೆ.
3. ನಗರದ ಹೊರ ವಲಯದಲ್ಲಿರುವ ಕೆರೆಗಳನ್ನು ಪುನಶ್ಚೇತನಗೊಳಿಸಿ, ಮಳೆ ನೀರು ಶೇಖರಿಸಿ ಉಪಯೋಗಿಸಿಕೊಳ್ಳಲಾಗುವುದು.
4. ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

**ಕೃಷ್ಣದೇವರಾಯರ ಪಟ್ಟಾಭಿಷೇಕ ಮಹೋತ್ಸವ**

**213 (308) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) :** ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಕೃಷ್ಣದೇವರಾಯರ 500ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವಕ್ಕೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಆ) ಉತ್ತರ ಕರ್ನಾಟಕದ ಭಾಗಗಳಲ್ಲಿ ಪ್ರವಾಹದಿಂದ ನೊಂದ ಸಂತ್ರಸ್ಥರಿಗೆ ಮನೆಗಳನ್ನು ಕಟ್ಟಿಸಿಕೊಡಲು ಈ ಹಣವನ್ನು ಖರ್ಚುಮಾಡ ಬಹುದಾಗಿತ್ತಲ್ಲವೇ;

ಇ) 2009ರಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸದ ಸರ್ಕಾರ ಈ ಸಮಾರಂಭವನ್ನು ಅದ್ಧೂರಿಯಾಗಿ ಆಚರಿಸಲು ಕಾರಣಗಳೇನು;

ಈ) ಈ ಸಮಾರಂಭದಿಂದ ರಾಜ್ಯಕ್ಕೆ ಉಂಟಾದ ಲಾಭವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಶ್ರೀ ಕೃಷ್ಣದೇವರಾಯರವರ 500ನೇ ವರ್ಷದ ಪಟ್ಟಾಭಿಷೇಕದ ಮಹೋತ್ಸವಕ್ಕೆ ವಿವಿಧ ಇಲಾಖೆಗಳು ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

| ಇಲಾಖೆಗಳು | ಖರ್ಚಾದ ಹಣದ ಮೊತ್ತ |
|---|---|
| 1. ಲೋಕೋಪಯೋಗಿ ಇಲಾಖೆ | 6,00,00,000.00 |
| 2. ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ | 20,00,000.00 |
| 3. ಪ್ರವಾಸೋದ್ಯಮ ಇಲಾಖೆ | 6,41,00,000.00 |
| 4. ವಾರ್ತಾ ಇಲಾಖೆ | 2,81,53,491.00 |
| 5. ಕನ್ನಡ ವಿಶ್ವವಿದ್ಯಾಲಯ (ಶಿಕ್ಷಣ ಇಲಾಖೆ) | 5,05,000.00 |
| 6. ಜಿಲ್ಲಾಧಿಕಾರಿಗಳು, ಬಳ್ಳಾರಿ | 8,40,31,500.00 |
| 7. ಪೊಲೀಸ್ ಇಲಾಖೆ, ಬಳ್ಳಾರಿ | 39,96,562.00 |
| 8. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ | 3,70,05,850.00 |
| 9. ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ. | 6,00,000.00 |
| 10. ಕಾಲೇಜು ಶಿಕ್ಷಣ ಇಲಾಖೆ. | 6,00,000.00 |
| ಒಟ್ಟು | 28,09,92,403.00 |

ಆ) ಇದು ಸರ್ಕಾರದ ಕಾರ್ಯಕ್ರಮವಾಗಿದ್ದು, ಪ್ರವಾಹದಿಂದ ನೊಂದ ಸಂತ್ರಸ್ತರಿಗೆ ಮನೆಗಳನ್ನು ಕಟ್ಟಿಸಿಕೊಡಲು ಕಂದಾಯ ಇಲಾಖೆಯು ಕ್ರಮ ಕೈಗೊಳ್ಳುತ್ತಿದೆ. ಆದ್ದರಿಂದ ಈ ಹಣವನ್ನು ಇದಕ್ಕೆ ಬಳಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉತ್ತರ ಕರ್ನಾಟಕದ 17 ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ಆ ಸಮಯದಲ್ಲಿ ಆಗಿದ್ದುದರಿಂದ ರಾಜ್ಯೋತ್ಸವ ಆಚರಣೆಯನ್ನು ಮಾಡಲಾಗಲಿಲ್ಲ.

ಈ)

1. ಶ್ರೀ ಕೃಷ್ಣದೇವರಾಯರ ಕಾಲದ ಗತವೈಭವ ನೆನಪನ್ನು ಮರುಕಳಿಸುವುದಕ್ಕೆ ಸಹಾಯವಾಗುವಂತೆ ಪ್ರತಿ ಜಿಲ್ಲೆಯಿಂದ 500 ರಿಂದ 1000 ವಿದ್ಯಾರ್ಥಿಗಳನ್ನು ಹಂಪಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಯ್ತು – ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.
2. ಹಲವಾರು ಪ್ರಕಟಣೆಗಳನ್ನು ಶ್ರೀ ಕೃಷ್ಣದೇವರಾಯರ ಮೇಲೆ ತರಲಾಗಿದೆ. ಸಾರ್ವಜನಿಕರಿಗೆ ಇದರಿಂದ ಸಹಾಯವಾಗಿದೆ.
3. ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಶ್ರೀ ಕೃಷ್ಣದೇವರಾಯರ ಹಾಗೂ ವಿಜಯ ನಗರದ–ಇತಿಹಾಸ–ವೈಭವ ಇವುಗಳ ಬಗ್ಗೆ ಹಾಗೂ ಮುಂದೆ ಮಾಡಬೇಕಾದ ಕೆಲಸ ಇವುಗಳ ಬಗ್ಗೆ – ಚರ್ಚಿಸಿದೆ.
4. ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆ ಹಮ್ಮಿಕೊಂಡಿದ್ದು, ನಮ್ಮ ಸಂಸ್ಕೃತಿ ವೈಭವವನ್ನು ಸಾರ್ವಜನಿಕರಿಗೆ ತಿಳಿಸಿದೆ.
5. ಬೇರೆ ಬೇರೆ ದೇಶಗಳಿಂದ, ರಾಜ್ಯಗಳಿಂದ ಪ್ರವಾಸಿಗರು ಹಂಪಿಗೆ ಹೆಚ್ಚೆಚ್ಚು ಬರುವುದರಿಂದ – ವಿದೇಶಿ ವಿನಿಮಯ ದೇಶಕ್ಕೆ ಬರುತ್ತದೆ. ಅಲ್ಲದೆ ರಾಜ್ಯಕ್ಕೂ ಪರೋಕ್ಷವಾಗಿ ಸಹಾಯವಾಗುತ್ತದೆ.
6. ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ಲಕ್ಷಾಂತರ ಜನ ರಾಜ್ಯದ ಎಲ್ಲಾ ಕಡೆಯಿಂದ ಹಂಪಿಗೆ ಭೇಟಿ ನೀಡಿರುತ್ತಾರೆ.
7. ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳಿಗೆ ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು – ವಿದ್ಯಾರ್ಥಿಗಳಿಗೆ ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿ ಬಗ್ಗೆ ಹೆಚ್ಚಿನ ಅರಿವು ಮೂಡಿಸಿದಂತಾಗಿದೆ ಹಾಗೂ ಹೆಮ್ಮೆಪಟ್ಟುಕೊಳ್ಳುವಂತೆ ಕಾರ್ಯಕ್ರಮ ಕೈಗೊಳ್ಳಲಾಗಿದೆ.